2) ಕೇಂದ್ರ ಸರ್ಕಾರಿ ಕಛೇರಿಗಳಲ್ಲಿ 182

3) ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ಸಂಸ್ಥೆಗಳಲ್ಲಿ 434

ಈ ಸಂಬಂಧವಲ್ಲಿ 435 ಜನರ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳನ್ನು ನೋಂದಾಯಿಸಲಾಗಿದ್ದು, ಅಂತಹವರುಗಳ ವಿರುದ್ಧ ಇಲಾಖಾ ಶಿಸ್ತಿನ ಕ್ರಮ ಜರುಗಿಸಲು ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರಿಗೆ ಶಿಫಾರಸ್ಸು ಮಾಡಲಾಗಿದೆ.

ಊ) ಸುಳ್ಳು ಪ್ರಮಾಣ ಪತ್ರ ನೀಡಿದ 272 ಅಧಿಕಾರಿಗಳ ಬಗ್ಗೆ ನಾಗರೀಕ ಹಕ್ಕು ಜಾರಿ ವಿಭಾಗದಿಂದ ವರದಿ ಬಂದಿದ್ದು ಈ ಅಧಿಕಾರಿಗಳ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿಷಯ :– ವರದಕ್ಷಿಣೆ ಪಿಡುಗಿನಿಂದ ಸತ್ತಿರುವವರ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 773 (254)

ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) :– ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 1989–90, 1990–91 ನೇ ಸಾಲುಗಳಲ್ಲಿ ರಾಜ್ಯದಲ್ಲಿ ವರದಕ್ಷಿಣೆ ಪಿಡುಗಿನಿಂದ ಸತ್ತಿರುವವರ ಸಂಖ್ಯೆ ಎಷ್ಟು ?

ಆ) ಅವುಗಳನ್ನು ಕಡಿಮೆ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ (ಗೃಹ ಸಚಿವರು) :–

ಅ) 1989 ಮತ್ತು 1990 ರಲ್ಲಿ (ಸೆಪ್ಟೆಂಬರ್‌ವರೆಗೆ) ವರದಕ್ಷಿಣೆ ಪಿಡುಗಿನಿಂದ ಸುಟ್ಟುಗೀಡಾದ ಮಹಿಳೆಯರ ಸಂಖ್ಯೆ ಈ ಕೆಳಕಂಡಂತಿವೆ :–

1989	1990 (30–9–90 ರ ವರೆಗೆ)
190	155

ಆ) ವರದಕ್ಷಿಣೆ ಸಾವಿನ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರವು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳು ಈ ಕೆಳಕಂಡಂತಿವೆ :–

1) ಭಾರತೀಯ ದಂಡ ಸಂಹಿತೆ ಮತ್ತು ವರದಕ್ಷಿಣೆ ನಿಷೇಧ ಕಾನೂನನ್ನು ಇತ್ತೀಚಿನ ವರ್ಷಗಳಲ್ಲಿ ತಿದ್ದುಪಡಿ ಮಾಡಿ ಅಪರಾಧಿಗಳಿಗೆ ತೀವ್ರ ಮತ್ತು ಹೆಚ್ಚಿನ ಶಿಕ್ಷೆ ವಿಧಿಸುವಂತೆ ಮಾಡಲಾಗಿದೆ.

2) ಭಾರತೀಯ ದಂಡ ಸಂಹಿತೆಯಲ್ಲಿ 304 (ಬಿ) ಎಂಬ ಹೊಸ ಕಾನೂನನ್ನು ವರದಕ್ಷಿಣೆ ಮರಣ ವೆಂದು ನಿರೂಪಿಸಿ ಸೇರಿಸಲಾಗಿದೆ.

3) ಪೋಲೀಸ್ ಇಲಾಖೆಯಲ್ಲಿ ಈ ಪ್ರಕರಣಗಳಿಗೆ ಹೆಚ್ಚು ಆದ್ಯತೆ ಮತ್ತು ದಕ್ಷತೆಯಿಂದ ಗಮನ ಕೊಡುವಂತೆ ಮಾಡಲು ಈ ಅಪರಾಧಗಳನ್ನು ಡಿ.ಎಸ್.ಪಿ. ದರ್ಜೆಯ ಅಧಿಕಾರಿಗಳು ತಪಾಸಿಸ ಬೇಕೆಂದು ಹಾಗೂ ಸರ್ವೇ ಸಾಮಾನ್ಯ ಈ ಪ್ರಕರಣಗಳನ್ನು ಆದಷ್ಟು ಬೇಗ ಸಿ.ಓ.ಡಿ. ತನಿಖೆಗೆ ಒಪ್ಪಿಸಬೇಕೆಂದು ಕ್ರಮ ಕೈಗೊಳ್ಳಲಾಗಿದೆ.

4) ಇಂತಹ ಪ್ರಕರಣಗಳಲ್ಲಿ ವೈದ್ಯಕೀಯ ಮರಣೋತ್ತರ ಶವ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಲಾಗುತ್ತದೆ.

5) ಈ ಪ್ರಕರಣಗಳನ್ನು ಆದ್ಯತೆಯಿಂದ ತನಿಖೆ ಮಾಡಲು ಸಿ.ಓ.ಡಿ. ಯಲ್ಲಿ ವರದಕ್ಷಿಣೆ ಪ್ರತಿಬಂಧಕ ದಳವನ್ನು ಈಗಾಗಲೇ ಸ್ಥಾಪಿಸಲಾಗಿದ್ದು ಅದು ಕಾರ್ಯತತ್ಪರವಾಗಿದೆ.

6) ಈ ಪ್ರಕರಣಗಳ ಪ್ರಚೋದಕರ ವಿರುದ್ಧ ಕಾನೂನಿನಂತೆ ದಂಡನಾ ಕ್ರಮ ತೆಗೆದುಕೊಳ್ಳಲಾಗುವುದು

ವಿಷಯ :– ರಾಜ್ಯದ ನೇಕಾರರ ಕುಟುಂಬಕ್ಕೆ ಹಸಿರು ಕಾರ್ಡ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 774 (907)

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಡುಬಡತನದಲ್ಲಿ ಜೀವನ ನಡೆಸುತ್ತಿರುವ ನೇಕಾರ ಕುಟುಂಬದವರಿಗೆ ಹಸಿರು ಕಾರ್ಡು ಒದಗಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ ?

ಆ) ರಾಜ್ಯದಲ್ಲಿ ಒಟ್ಟು ಎಷ್ಟು ನೇಕಾರರ ಕುಟುಂಬಗಳು ಇವೆ ಎಂಬ ಮಾಹಿತಿ ಸರ್ಕಾರಕ್ಕೆ ಇದೆಯೇ ?

ಇ) ಅವರೆಲ್ಲರಿಗೂ ಹಸಿರು ಕಾರ್ಡು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :–

ಅ) ಸರ್ಕಾರದ ಆದೇಶ ಸಂಖ್ಯೆ ಎಫ್‌ಟಿಡಿ. 57 ಡಿಆರ್‌ಎ. 85 ದಿನಾಂಕ 3–9–85 ಹಾಗೂ ಅನಂತರದ ಆದೇಶದಲ್ಲಿ ಗ್ರಾಮಾಂತರ ಪ್ರದೇಶಗಳ ವಾರ್ಷಿಕ ವರಮಾನ 3500 ರೂ.ಗಳು ಹಾಗೂ ಇದಕ್ಕಿಂತ ಕಡಿಮೆಯಿರುವ ಎಲ್ಲಾ ಕುಟುಂಬಗಳು ಹಸಿರು ಕಾರ್ಡುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ನೇಕಾರ ಜನಾಂಗವನ್ನು ಮೇಲಿನ ಆದೇಶದಲ್ಲಿ ಸೇರ್ಪಡೆ ಮಾಡದಿದ್ದರೂ ಸಹ ಗ್ರಾಮೀಣ ಪ್ರದೇಶ ಹಾಗೂ 20,000 ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಅಂತಹ ಕುಟುಂಬದವರು ರೂ. 3500 ಮತ್ತು ಅದಕ್ಕಿಂತ ಕಡಿಮೆ ವಾರ್ಷಿಕ ವರಮಾನವುಳ್ಳ ಬಡಜನರು ಯಾವುದೇ ಜನಾಂಗ ಬೇಧವಿಲ್ಲದೆ ಹಸಿರು ಕಾರ್ಡುಗಳನ್ನು ಪಡೆಯಲು ಅರ್ಹರಾಗಿರುತ್ತಾರೆ.

ಆ) 68,068 ಕುಟುಂಬಗಳು ಇರುತ್ತವೆ.

ಇ) ಮೇಲಿನ ವಿವರಣೆಯಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ :– ಆಹಾರ ಕಲಬೆರಕೆ ನಿಲ್ಲಿಸಲು ಸರ್ಕಾರ ತೆಗೆದುಕೊಂಡ ಕ್ರಮ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 775 (1229)

ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ) :– ಮಾನ್ಯ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಆಹಾರ ಮತ್ತು ಇನ್ನಿತರ ವಸ್ತುಗಳ ಕಲಬೆರಕೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) 1988–89, 1989–90 ರ ಅಕ್ಟೋಬರ್ ವರೆಗೆ ಆಹಾರ ಕಲಬೆರಕೆಯ ಬಗ್ಗೆ ಎಷ್ಟು ಪ್ರಕರಣ ಪತ್ತೆ ಹಚ್ಚಲಾಗಿದೆ. ಎಷ್ಟು ದಾವೆಗಳನ್ನು ಹೂಡಲಾಗಿದೆ. ಎಷ್ಟು ಜನರಿಗೆ ಶಿಕ್ಷೆ ಆಗಿದೆ ?

ಇ) ಈ ಕಲಬೆರಕೆಯನ್ನು ನಿಲ್ಲಿಸಲು ಸರ್ಕಾರ ಏನಾದರೂ ಉಗ್ರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :–

ಅ) ಹೌದು. ಆಹಾರ ಕಲಬೆರಕೆಗೆ ಸಂಬಂಧಿಸಿದ ವಿಷಯಗಳು ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ, ನಗರಸಭೆ ಮತ್ತು ಪುರಸಭೆಗಳ ವ್ಯಾಪ್ತಿಗೆ ಒಳಪಟ್ಟಿದ್ದು ಸೀಮೆಎಣ್ಣೆ, ಡೀಸೆಲ್ ಮತ್ತು ಪೆಟ್ರೋಲ್ ಕಲಬೆರಕೆಯ ವಿಷಯಗಳು ಮಾತ್ರ ಆಹಾರ ಇಲಾಖೆಯ ವ್ಯಾಪ್ತಿಗೆ ಬರುತ್ತದೆ.

ಆ) ಸೀಮೆಎಣ್ಣೆ, ಡೀಲ್‌ಸೆ ಮತ್ತು ಪೆಟ್ರೋಲ್ ಕಲಬೆರಕೆ ಮಾಡಿರುವ ಪ್ರಕರಣಗಳನ್ನು ಮಾತ್ರ ಪತ್ತೆ ಹಚ್ಚಿ ಮೊಕದ್ದಮೆಗಳನ್ನು ದಾಖಲಾಯಿಸಿರುವ ವಿವರ ಕೆಳಕಂಡಂತಿದೆ. :–

1988–89ನೇ ಸಾಲಿನಲ್ಲಿ 244 ಪ್ರಕರಣಗಳನ್ನು 1989–90 ನೇ ಅಕ್ಟೋಬರ್ ವರೆಗೆ 79 ಪ್ರಕರಣ ಗಳನ್ನು ಪತ್ತೆಹಚ್ಚಿ ಅಗತ್ಯ ವಸ್ತುಗಳ ಕಾಯಿದೆ 1955ರ ಅಡಿಯಲ್ಲಿ ದಾಖಲು ಮಾಡಿ, ಮೊಕದ್ದಮೆಗಳನ್ನು ಹೂಡಲಾಗಿದೆ. ಸದರಿ ಮೊಕದ್ದಮೆಗಳು ವಿವಿಧ ನ್ಯಾಯಾಲಯಗಳಲ್ಲಿ ವಿವಿಧ ಹಂತದಲ್ಲಿ ವಿಚಾರಣೆಯಲ್ಲಿ ಇರುತ್ತದೆ.

ಇ) ಸೀಮೆಎಣ್ಣೆ, ಡೀಸಲ್ ಮತ್ತು ಪೆಟ್ರೋಲ್ ಕಲಬೆರಕೆ ಮಾಡುವಂತಹ ಪ್ರಕರಣಗಳನ್ನು ಪತ್ತೆ-ಹಚ್ಚಿ ಅಗತ್ಯ ವಸ್ತುಗಳ ಕಾಯಿದೆ 1955ರ ಮೇರೆಗೆ ಕ್ರಮ ಜರುಗಿಸುವಂತೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.